ಅಸಲು ದಾವಾ ನಂ. :173/2021
ಪಿ ಡಬ್ಲ್ಯೂ :1

(ಇಂದು ದಿನಾಂಕಃ 02-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀ ಸವಾಲುಃ- 1ಮತ್ತು 2ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಸಿ ಎಂ ಸಿ ರವರಿಂದಃ

ನಾನು ಕಳೆದ 4ವ ರ್ಷಗಳಿಂದ ಸರ್ಕಾರಿ ಶಾಲೆಯಲ್ಲಿ ಗೌರವಧನ ಆಧಾರದ ಮೇಲೆ ಶಿಕ್ಷಕಿಯಾಗಿ ಕರ್ತವ್ಯ ನಿರ್ಹಿಸುತ್ತಿದ್ದೇನೆ. ನನ್ನ ಅಜ್ಜನ ಹೆಸರು ಬಸವೇಗೌಡ. ನನ್ನ ಅಜ್ಜನಿಗೆ 4 ಜನ ಮಕ್ಕಳು. ಅವರುಗಳು ಎಂದರೆ ಸೋಮೇಗೌಡ ಇದ್ದು ಉಳಿದವರ ಹೆಸರು ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪಂದಿರಿಗೆ ಹೆಣ್ಣು ಮಕ್ಕಳು ಇರಲಿಲ್ಲ. ನನ್ನ ಅಜ್ಜ ಬಸವೇಗೌಡರಿಗೆ 3 ಜನ ಹೆಣ್ಣು ಮಕ್ಕಳು ಇದ್ದರು. ನನ್ನ ಅಜ್ಜನಿಗೆ 4 ಜನ ಗಂಡು ಮತ್ತು 3 ಜನ ಹೆಣ್ಣು ಮಕ್ಕಳು ಇದ್ದರು.

ನನ್ನ ತಂದೆಯ ಮತ್ತು ಅವರ ಸಹೋದರರ ಸಹೋದರಿಯರ ಮಧ್ಯೇ ವಿಭಾಗ ಆಗಿರುವ ವಿಚಾರ ತಿಳಿದುಕೊಂಡಿಲ್ಲ. ನನ್ನ ಅಜ್ಜನಿಗೆ ಎಷ್ಟು ಎಕರೆ ಜಮೀನು ಇತ್ತು ಎಂದು ಗೊತ್ತಿಲ್ಲ. ದಾವೆ ಹಾಕುವ ಸಮಯದಲ್ಲಿ ನನ್ನ ಅಜ್ಜ ಬಸವೇಗೌಡರ ಹೆಸರಿನಲ್ಲಿ ಎಷ್ಟು ಎಕರೆ ಜಮೀನು ಇತ್ತು ಎಂದು ತಿಳಿದುಕೊಂಡಿಲ್ಲ. ದಾವೆಯಲ್ಲಿ ನನ್ನ ತಂದೆಗೆ ದಾವಾಸ್ತಿಗಳು ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದು ಹೇಳಿರುತ್ತೇನೆ. ಪಿತ್ರಾರ್ಜಿತ ಆಸ್ತಿಗಳು ಎಂದರೆ ತಂದೆಯ, ತಂದೆಯ ತಂದೆ, ತಂದೆಯ ತಂದೆಯ ತಂದೆ ಆಸ್ತಿಗಳು ಆಗಿರುತ್ತದೆ. ದಾವಾಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ.

ನನ್ನ ಅಜ್ಜನ ಹೆಸರಿನಲ್ಲಿದ್ದ ಆಸ್ತಿಗಳ ಪೈಕಿ ಯಾವ ಯಾವ ಆಸ್ತಿಗಳು ನನ್ನ ಚಿಕ್ಕಪ್ಪ ಮತ್ತು ದೊಡ್ಡಪ್ಪನವರಿಗೆ ಹಂಚಿಕೆಯಾಗಿರುತ್ತದೆ ಎಂದು ತಿಳಿದುಕೊಂಡಿಲ್ಲ. ನನ್ನ ತಂದೆಯ ಸಹೋದರರ ನಡುವೆ ವಿಭಾಗ ಆಗಿರುವ ಬಗ್ಗೆ ವಿಭಾಗ ಪತ್ರ ಹಾಜರುಪಡಿಸಿಲ್ಲ. ದಾವಾಸ್ತಿಗಳು ನನ್ನ ತಂದೆಗೆ ಮುಟೇಶನ್ ಮೂಲಕ ಬಂದ ಬಗ್ಗೆ ಮುಟೇಶನ್ ನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿ ದಾಖಲಾತಿಗಳನ್ನು ನೋಡಿ ದಾವಾಸ್ತಿಗಳು ನನ್ನ ತಂದೆಗೆ ಮುಟೇಶನ್ ಮೂಲಕ ಬಂದ ಬಗ್ಗೆ ಮುಟೇಶನ್ ನ್ನು ಹಾಜರು ಪಡಿಸಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆಯ ಹೆಸರಿನಲ್ಲಿ ಹಳೇಬೀಡಿನಲ್ಲಿ ಮನೆ ಇರುತ್ತದೆ ಎಂದರೆ ಸಾಕ್ಷಿ ಅದು ತಾಯಿಯ ಹೆಸರಿನಲ್ಲಿ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾಯಿಯ ಹೆಸರು ಶಾರದಮ್ಮ. ನನ್ನ ತಂದೆಗೆ ದಿಃ08–12–1987 ರಂದು ಚನ್ನೇಗೌಡರ ಮಗ ಹೆಚ್ ಸಿ ಯೋಗಪ್ಪರವರಿಂದ ನಿವೇಶನ ಸಂಖ್ಯೆ.8 ಇದ್ದು ಪೂರ್ವ–ಪಶ್ಚಿಮ 60 ಅಡಿ, ಉತ್ತರ– ದಕ್ಷಿಣ 40 ಅಡಿ ಬಂದಿರುತ್ತದೆ. ಸದರಿ ಆಸ್ತಿ ನನ್ನ ತಂಲದೆಯ ಮರಣ ನಂತರ ನನ್ನ ತಾಯಿಯ ಹೆಸರಿನಗೆ ಪೌತಿ ಆಧಾರ ಮೇಲೆ ವರ್ಗಾವಣೆಯಾಗಿರುತ್ತದೆ.

ನನ್ನ ತಂದೆ 2017 ರಲ್ಲಿ ಮರಣ ಹೊಂದಿರುತ್ತಾರೆ. ಸದರಿ ಆಸ್ತಿಯನ್ನು ದಾವೆಯಲ್ಲಿ ಸೇರಿಸಿಲ್ಲ ಕಾರಣ ಅದು ತಾಯಿಯ ಸ್ವಾರ್ಯಾಜಿತ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿ ನನ್ನ ತಂದೆಯಿಂದ ನನ್ನ ತಾಯಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ಈಗ ಸದರಿ ನಿವೇಶನದಲ್ಲಿ ಮನೆಯಾಗಿರುತ್ತದೆ. ಹಳೇಬೀಡಿನಲ್ಲಿರುವ ನಿವೇಶನದ ಮಾರುಕಟ್ಟೆ ಮೌಲ್ಯ ಎಷ್ಟು ಎಂದು ನನಗೆ ಹೇಳಲು ಆಗುವುದಿಲ್ಲ. ದಾವೆ ಹಾಕುವ ಸಮಯದಲ್ಲಿ ಹಳೇಬೀಡಿನಲ್ಲಿರುವ ಆಸ್ತಿ ನನ್ನ ತಂದೆ ಹೆಸರಿನಲ್ಲಿದ್ದು ನಂತರ ನನ್ನ ತಾಯಿಯ ಹೆಸರಿಗೆ ಪೌತಿ ಆಧಾರದ ಮೇಲೆ ವರ್ಗಾವಣೆಯಾಗಿರುತ್ತದೆ.

ಸರ್ವೆ ನಂ. 141 ನಮ್ಮ ಕುಟುಂಬದ ಆಸ್ತಿಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ತಿ ನನ್ನ ತಂದೆಯ ಸ್ವಾರ್ಯಾಜಿತ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯನ್ನು ನನ್ನ ತಂದೆ ಯಾವ ವರ್ಷದಲ್ಲಿ ಮತ್ತು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ಗೊತ್ತಿಲ್ಲ. ಸದರಿ ಆಸ್ತಿ ನನ್ನ ತಂದೆಯ ಸ್ವಾರ್ಯಾಜಿತ ಆಸ್ತಿ ಎನ್ನುವ ಬಗ್ಗೆ ಕ್ರಯ ಪತ್ರವನ್ನು ನೋಡಿಲ್ಲ. ಸದರಿ ಆಸ್ತಿ ನನ್ನ ಅಜ್ಜನಿಂದ ಬಂದ ಆಸ್ತಿಯಾಗಿರುವುದಿಲ್ಲ. ಸರ್ವೆ ನಂ. 141 ರ ಆಸ್ತಿಯ ದಾಖಲೆಗಳನ್ನು ನೋಡಿಲ್ಲ. ಸರ್ವೆ ನಂ. 141 ಪಿತ್ರಾರ್ಜಿತ ಆಸ್ತಿಯಾಗಿದ್ದು ಅದನ್ನು ನನ್ನ ವಿವಾಹದ ಖರ್ಚಿಗಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಅದು ಪಿತ್ರಾರ್ಜಿತ ಆಸ್ತಿಯಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂ. 141 ಆಸ್ತಿಯ ಬಗ್ಗೆ ದಾವೆಯಲ್ಲಿ ಎಲ್ಲಿಯು ಸಹ ಹೇಳಿಲ್ಲ. ಸದರಿ ಆಸ್ತಿ ನನ್ನ ತಂದೆಯ ಸ್ವಾರ್ಯಾಜಿತ ಆಸ್ತಿ ಎನ್ನುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿಲ್ಲ. ಸರ್ವೆ ನಂ. 147 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ. ಸರ್ವೆ ನಂ. 147 ರಲ್ಲಿ ಪಿತ್ರಾರ್ಜಿತವಾಗಿ ಎಷ್ಟು ಆಸ್ತಿ ಇತ್ತು ಎಂದು ಗೊತ್ತಿಲ್ಲ. ಸರ್ವೆ ನಂ. 147 ರ ಆಸ್ತಿ ಮಾರಾಟ ಆಗಿಲ್ಲ. ಸರ್ವೆ ನಂ.

141 ಮತ್ತು 147 ಪಿತ್ರಾರ್ಜಿತ ಆಸ್ತಿಗಳಾಗಿದ್ದರು ಸಹ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ದಾವೆಯಲ್ಲಿ ಹಳೇಬೀಡಿನಲ್ಲಿರುವ ಮನೆಯ ಬಗ್ಗೆ ಹೇಳಿಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲವಕಾಶ ಕೋರಿದ್ದು, ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು